ಆಸ್ಪತ್ರೆಯಲ್ಲಿ ಹಾಸಿಗೆಯ ಸಂಖ್ಯೆಯನ್ನು ಜಾಸ್ತಿ ಮಾಡಲು ಮಾಡಿರುವ ಪ್ರಯತ್ನ ಇನ್ನೂ ಸಫಲವಾಗಿಲ್ಲ. 686 ಹಾಸಿಗೆಗಳು ಅಲ್ಲಿದೆ. ಅದರಲ್ಲಿ 120 ಹಾಸಿಗೆಗಳನ್ನು ಗೈನಕಾಲಜಿ ಡಿಪಾರ್ಟ್‌ಮೆಂಟ್‌ಗೆ ಅಲಾಟ್ ಮಾಡಿದ್ದಾರೆ. ಕೆಲವು ಯೂನಿಟ್‌ಗಳಲ್ಲಿ ಹಾಸಿಗೆಗಳು ಯಾವಾಗಲೂ ಖಾಲಿ ಇರುತ್ತದೆ. ಅದಕ್ಕಾಗಿ ತಾವು ಸೂಪರಿಂಟೆಂಡೆಂಟ್ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರ ಸಭೆಯನ್ನು ಕರೆದು ಎಲ್ಲಿ ಹಾಸಿಗೆಗಳು ಖಾಲಿ ಇರುತ್ತದೆ ಅದನ್ನು ರೀ-ಅಲೊಕೇಟ್ ಮಾಡಿದರೆ ತತ್‌ಕ್ಷಣ ಐವತ್ತು ಅರವತ್ತು ಹಾಸಿಗೆಗಳು ಸಿಗುತ್ತದೆ. ಇದು ತಾತ್ಕಾಲಿಕವಾದ ಸಲಹೆಯಾಗುತ್ತದೆ. ಇದನ್ನು ಮಾಡಲು ಸಾಧ್ಯವೇ?

ಶ್ರೀಮತಿ ನಫಿಸಾ ಫಜಲ್: ಮಾನ್ಯ ಸಿಂಧ್ಯರವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಒಂದೇ ಹಾಸಿಗೆಯಲ್ಲಿ ಇಬ್ಬರು ವ್ಯಕ್ತಿಗಳನ್ನು ಹಾಕಿದ್ದರು ಎಂದು ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದರು. ಕಳೆದ ವಾರ ಇದೇ ರೀತಿ ಮಾಡಿದ್ದ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಆಗ ನಾನು ಇದರ ಬಗ್ಗೆ ವಿಚಾರ ಮಾಡಿದಾಗ ಪದೇ ಪದೇ ಈ ರೀತಿ ನಡೆಯುತ್ತಿದೆ ಎಂಬ ವಿಚಾರ ನನಗೆ ತಿಳಿದು ಬಂತು. ಆ ರೀತಿ ಒಂದು ಹಾಸಿಗೆಗೆ ಇಬ್ಬರನ್ನು ಹಾಕುವುದು ಸರಿಯಲ್ಲ ಆ ರೀತಿ ಮಾಡಬೇಡಿ ಎಂದು ಈಗಾಗಲೇ ನಾನು ಆದೇಶ ಕೊಟ್ಟಿದ್ದೇನೆ.

(ಆ) ಗುಂಡ್ಲುಪೇಟೆಯಲ್ಲಿ ಗಣಪತಿಯ ಪ್ರತಿಷ್ಠಾಪನೆ

+ ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೆ, ಗುಂಡ್ಲುಪೇಟೆ ಪುರಸಭೆಗೆ ಸೇರಿರುವ ಮೂರನೇ ವಿಭಾಗದ ಒಂದು ನಿವೇಶನದಲ್ಲಿ ಇದ್ದಕ್ಕಿದ್ದಂತೆ ಮಧ್ಯರಾತ್ರಿಯಲ್ಲಿ ಗಣಪತಿಯ ವಿಗ್ರಹವನ್ನು ಕೂರಿಸಿ ಆ ನಿವೇಶನವನ್ನು ಅನಧಿಕೃತವಾಗಿ ಆಕ್ರಮಿಸಿಕೊಳ್ಳಲು ಪ್ರಯತ್ನ ಮಾಡಿದ್ದಾರೆ. ಇದರ ಬಗ್ಗೆ ಪುರಸಭೆಯವರು ಜಿಲ್ಲಾಧಿಕಾರಿಯವರಿಗೆ ಮತ್ತು ಪೋಲೀಸ್ ಇಲಾಖೆಯವರಿಗೆ ದೂರು ಕೊಟ್ಟಿದ್ದರೂ ಸಹ ಕಳೆದ ಎರಡು ತಿಂಗಳಿನಿಂದ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಗುಂಡ್ಲುಪೇಟೆ ಪುರಸಭೆಯ ಆಸ್ತಿಯನ್ನು ರಕ್ಷಿಸಿ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ (ನಗರಾಭಿವೃದ್ಧಿ ರಾಜ್ಯ ಸಚಿವರು): ೧. ದಿನಾಂಕ: ೧೪-೧-೨೦೦೦ರ ಮಧ್ಯ ರಾತ್ರಿಯಲ್ಲಿ ಪುರಸಭೆಗೆ ಸೇರಿದ ೩ನೇ ವಿಭಾಗದ ಅನುಮ: ೫೮೦ಎ-೫೦೪ರ ಆಳತೆ ೧೩.೭೫ ೧೫.೭೫ ಮೀಟರ್ ನಿವೇಶನದಲ್ಲಿ ಅನಧಿಕೃತವಾಗಿ ಸಾರ್ವಜನಿಕರು ಗಣಪತಿಯನ್ನು ಪ್ರತಿಷ್ಠಾಪನೆ ಮಾಡಿರುತ್ತಾರೆ.

೨. ದಿನಾಂಕ ೧೫-೧-೨೦೦೦ ರಂದು ಬೆಳಿಗ್ಗೆ ೧೦-೩೦ರ ಸಮಯದಲ್ಲಿ ಪೋಲೀಸ್ ಇಲಾಖೆಗೆ ಪುರಸಭೆಯಿಂದ ಲಿಖಿತವಾಗಿ ದೂರು ಸಲ್ಲಿಸಿ ಸದರಿ ಅನಧಿಕೃತವಾಗಿ ಪ್ರತಿಷ್ಠಾಪಿಸಿದ ಗಣಪತಿ ವಿಗ್ರಹವನ್ನು ಖಿಲ್ಲಾ (ಖಾಲಿ) ಮಾಡಿಸಲು ಕೋರಲಾಯಿತು.

೩. ದಿನಾಂಕದ: ೧೭-೧-೨೦೦೦ ರಂದು ಜಿಲ್ಲಾಧಿಕಾರಿಗಳು, ಚಾಮರಾಜನಗರ ರವರಿಗೆ ಈ ವಿಷಯದ ಬಗ್ಗೆ ಪುರಸಭೆಯ ಮುಖ್ಯಾಧಿಕಾರಿಗಳು ಪತ್ರ ಬರೆದು ಸದರಿ ಗಣಪತಿ ವಿಗ್ರಹವನ್ನು ಖಿಲ್ಲಾ ಮಾಡಿಸಲು ಸೂಕ್ತ ಪೋಲೀಸ್ ರಕ್ಷಣೆ ಒದಗಿಸಲು ಪತ್ರ ಬರೆಯಲಾಗಿತ್ತು.

೪. ದಿನಾಂಕದ ೨೧-೧-೨೦೦೦ರಂದು ಸಾರ್ವಜನಿಕರು ವರಸಿದ್ಧಿ ವಿನಾಯಕ ಸಂಘ ರಚನೆ ಮಾಡಿಕೊಂಡು ಸದರಿ ನಿವೇಶನವನ್ನು ಸರ್ಕಾರಿ ದರದ ರೀತ್ಯಾ ನಿಗದಿಪಡಿಸಿ ಸದರಿ ನಿವೇಶನವನ್ನು ಮಂಜೂರು ಮಾಡಿಕೊಡುವಂತೆ ಪುರಸಭೆಯನ್ನು ಕೋರಿರುತ್ತಾರೆ.

೫. ದಿನಾಂಕ: ೨೧-೧-೨೦೦೦ರಂದು ಸದರಿ ವರಸಿದ್ಧಿ ವಿನಾಯಕ ಸಂಘದವರಿಗೆ ಪುರಸಭಾ ನಿವೇಶನವನ್ನು ಹರಾಜಿನಲ್ಲಿ ಮಾತ್ರವೇ ವಿತರಿಸಲು ಸಾಧ್ಯವಿರುತ್ತದೆ. ಅಲ್ಲದೆ ಸರ್ಕಾರಿ ದರ ನಿಗದಪಡಿಸಿ ನಿವೇಶನ ನೀಡಲು ಪುರಸಭೆ ಕಾಯಿದೆಯಲ್ಲಿ ಅವಕಾಶವಿರುವುದಿಲ್ಲ ಎಂದು ಪುರಸಭೆಯವರು ಹಿಂಬರಹ ನೀಡಿದ್ದಾರೆ.

೬. ಚಾಮರಾಜನಗರ ಜಿಲ್ಲಾಧಿಕಾರಿಗಳು ದಿನಾಂಕ: ೨೧-೧-೨೦೦೦ರಂದು ಪಟ್ಟಣದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಹಾಗೂ ಶಾಂತಿ ಮತ್ತು ಸುವ್ಯವಸ್ಥೆ ಭಂಗಬಾರದ ರೀತಿಯಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

೭. ಜಿಲ್ಲಾಧಿಕಾರಿಗಳು ದಿನಾಂಕ: ೨೧-೧-೨೦೦೦ ರಂದು ಕಳುಹಿಸಿರುವ ಪತ್ರದ ರೀತ್ಯಾ ಕ್ರಮ ಕೈಗೊಳ್ಳಲು ಕೋರಿ ಪೋಲೀಸ್ ಇಲಾಖೆಗೆ ಪತ್ರ ಬರೆಯಲಾಗಿದೆ. ಪೋಲೀಸ್ ಇಲಾಖೆಯವರು ಇದುವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

(ಇ) ಬೆಂಗಳೂರಿನ ಕಂಠೀರವ ಸ್ಟೇಡಿಯಂ ಕುರಿತು.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿರುವಂತಹ ಕಂಠೀರವ ಸ್ಟೇಡಿಯಂ ರಾಷ್ಟ್ರೀಯ ಕ್ರೀಡಾಕೂಟಕ್ಕೆ 1997ರಲ್ಲಿ ತರಾತುರಿಯಲ್ಲಿ ನಿರ್ಮಾಣವಾಯಿತು. ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣವಾದ ಈ ಮುಖ್ಯ ಕ್ರೀಡಾಂಗಣದ ಇವತ್ತಿನ